ಅ)

ಕ್ರಮ ಸಂ.	ಬೆಂಗಳೂರು ನಗರದಲ್ಲಿರುವ ಲೋಕೋಪಯೋಗಿ ಇಲಾಖೆಗೆ ವ್ಯಾಪ್ತಿಗೆ ಒಳಪಡುವ ವಸತಿ ಸಮುಚ್ಚಯಗಳ ವಿವರ	ನಿರ್ಮಿಸಿದ ವರ್ಷ
1.	ವಸಂತನಗರ	1985
2.	ಜಯಮಹಲ್ (ಸಿ ಮತ್ತು ಡಿ ಮಾದರಿ)	1940
3.	ಆರ್.ಎಂ.ವಿ. ಎರಡನೇ ಹಂತ	1992
4.	ನಂದಿನಿ ಬಡಾವಣೆ (ಎಂ.ಐ.ಜಿ)	1985
5.	ನಂದಿನಿ ಬಡಾವಣೆ (ಎಲ್.ಐ.ಜಿ.)	1985
6.	ರಾಜಾಜಿನಗರ (ಆರ್.ಎಚ್.ಎಸ್)	1967
7.	ಜೀವನಭೀಮಾನಗರ (ಎ, ಬಿ, ಸಿ ಮತ್ತು ಡಿ ಮಾದರಿ)	1976
8.	ಕೋರಮಂಗಲ	1997
9.	ತಿಮ್ಮೇನಹಳ್ಳಿ	1978
10.	ವಿಲ್ಸನ್ ಗಾರ್ಡನ್ (15 ಸಮುಚ್ಚಯಗಳು)	1970
11.	ವಿಲ್ಸನ್ ಗಾರ್ಡನ್ (3 ಸಮುಚ್ಚಯಗಳು)	1992
12.	ವಿಲ್ಸನ್ ಗಾರ್ಡನ್ (1 ಸಮುಚ್ಚಯ)	2001
13.	ಜಯನಗರ 9ನೇ ಬ್ಲಾಕ್	1975
14.	ಲಾಲ್‌ಬಾಗ್ ಸಿದ್ದಾಪುರ	1976
15.	ಕಾವಲ್‌ಬೈರಸಂದ್ರ	1990

ಆ) ಪ್ರತಿ ವರ್ಷದ ಅನುದಾನದ ಲಭ್ಯತೆಯನ್ನಾಧರಿಸಿ ಸದರಿ ವಸತಿ ಸಮುಚ್ಚಯಗಳ ದುರಸ್ತಿ ಕಾರ್ಯ ಕೈಗೊಂಡು ಸುಸ್ಥಿತಿಯಲ್ಲಿಡಲಾಗುತ್ತಿದೆ.

ಇ) ಯಾವುದೇ ವಸತಿ ಸಮುಚ್ಚಯವು ಶಿಥಿಲಾವಸ್ಥೆಯಲ್ಲಿ ಇರುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಸದ್ಯಕ್ಕೆ ಈ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

569(193) : ಶ್ರೀ ಕೃಷ್ಣ ಪಾಲೇಮಾರ್ ಜೆ. (ಸೂರತ್ಕಲ್) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸಾರಿಗೆ ಸಂಸ್ಥೆಯವರು ಗ್ರಾಮೀಣ ಸಾರಿಗೆ ಯೋಜನೆಯಡಿಯಲ್ಲಿ ಖರೀದಿಸಿರುವ ಮಿನಿ ವಾಹನಗಳ ಸಂಖ್ಯೆ ಎಷ್ಟು;

ಆ) ಈ ಯೋಜನೆಯು ಲಾಭವನ್ನು ಹೊಂದುತ್ತಿದೆಯೇ;

ಇ) ಇನ್ನೂ ಹೆಚ್ಚಿನ ಬಸ್ಸುಗಳನ್ನು ಗ್ರಾಮೀಣ ಪ್ರದೇಶಕ್ಕೆ ಒದಗಿಸಿಕೊಟ್ಟು ಗ್ರಾಮೀಣ ಸಂಚಾರಕ್ಕೆ ಅನುಕೂಲ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) 1) ಕ.ರಾ.ರ. ಸಾ.ಸಂ. 150

2) ವಾ.ಕ.ರ.ಸಾ.ಸಂ. 155

3) ಈ.ಕ.ರ.ಸಾ.ಸಂ. 02

ಒಟ್ಟು 307

ಆ) ಹೌದು

ಇ) ಪ್ರಯಾಣಿಕರ ಒತ್ತಡ ಮತ್ತು ಸಾರಿಗೆ ಕಾರ್ಯಾಚರಣೆಯ ಆರ್ಥಿಕ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಅವಶ್ಯ ಕ್ರಮವನ್ನು ತೆಗೆದುಕೊಳ್ಳಲಾಗುವುದು.

570(195) : ಶ್ರೀ ಕೃಷ್ಣ ಪಾಲೇಮಾರ್ ಜೆ. (ಸೂರತ್ಕಲ್) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರಾವಳಿ ಪ್ರದೇಶದಲ್ಲಿ ಕಡಲ ಕೊರೆತವನ್ನು ತಡೆಗಟ್ಟಲು ಸರ್ಕಾರ ಹಮ್ಮಿಕೊಂಡ ಕಾರ್ಯಕ್ರಮಗಳೇನು ಹಾಗೂ ಅದಕ್ಕಾಗಿ ಕಳೆದ 3 ವರ್ಷಗಳ ಅವಧಿಯಲ್ಲಿ ವಿನಿಯೋಗಿಸಲಾದ ಹಣದ ಮೊತ್ತವೆಷ್ಟು;

ಆ) ಕರಾವಳಿ ಪ್ರದೇಶದ ಯಾವ ಯಾವ ಭಾಗಗಳಲ್ಲಿ ತಡೆಗೋಡೆಯನ್ನು ನಿರ್ಮಿಸಲಾಗಿದೆ;

ಇ) ತಡೆಗೋಡೆ ನಿರ್ಮಾಣದಲ್ಲಿ ಬಳಸುವ ತಂತ್ರಜ್ಞಾನವು ಫಲಕಾರಿಯಾಗಿದೆಯೇ? ಇಲ್ಲವಾದಲ್ಲಿ, ಮುಂದಿನ ಕ್ರಮಗಳೇನು;

ಈ) ಕಡಲ ಕೊರೆತದ ಕಾಮಗಾರಿಗಾಗಿ ಕೆಲಸ ಮಾಡಿಸಿಕೊಂಡ ಗುತ್ತಿಗೆದಾರರಿಗೆ ಹಣ ಪಾವತಿ ಆಗಿಲ್ಲ ಎಂಬುದು ನಿಜವೇ;

ಉ) ಈ ಕಾರಣದಿಂದಾಗಿ ಕಾಮಗಾರಿಗಳನ್ನು ಮಾಡಲು ಗುತ್ತಿಗೆದಾರರು ಮುಂದೆ ಬರದೆ ಕಾಮಗಾರಿಗಳು ಸ್ಥಗಿತಗೊಂಡಿರುವುದು ನಿಜವೇ;

ಊ) ಗುತ್ತಿಗೆದಾರರ ಬಾಕಿ ಹಣವನ್ನು ಯಾವಾಗ ಪಾವತಿಸಲಾಗುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ತೀವ್ರ ಸಮುದ್ರ ಕೊರೆತ ಸಂಭವಿಸುತ್ತಿರುವ ಪ್ರದೇಶಗಳಲ್ಲಿ ಸೆಂಟ್ರಲ್ ವಾಟರ್ ಅಂಡ್ ಪವರ್ ರಿಸರ್ಚ್ ಸ್ಟೇಷನ್, ಪುಣೆ ಮತ್ತು ಕರ್ನಾಟಕ ಇಂಜಿನಿಯರಿಂಗ್ ರಿಸರ್ಚ್ ಸ್ಟೇಷನ್, ಕೆ.ಆರ್. ಸಾಗರ ಇವರಿಂದ ವಿನ್ಯಾಸ ಮತ್ತು ಸಲಹೆ ಪಡೆದು ಅನುದಾನದ ಲಭ್ಯತೆಗೊಳಪಟ್ಟು ಕಾಲಕಾಲಕ್ಕೆ ಶಾಶ್ವತ / ತುರ್ತು ಸಮುದ್ರ ಕೊರೆತ ತಡೆಗೋಡೆಗಳನ್ನು ನಿರ್ಮಿಸಿ ಕರಾವಳಿ ಪ್ರದೇಶಗಳಲ್ಲಿ ಕಡಲ ಕೊರೆತವನ್ನು ತಡೆಗಟ್ಟಲಾಗುತ್ತಿದೆ. ಈಗಾಗಲೇ 56.19 ಕಿಮೀ. ಉದ್ದದ ಶಾಶ್ವತ ತಡೆಗೋಡೆಯನ್ನು ರಾಜ್ಯ ಸರ್ಕಾರದ ವತಿಯಿಂದ ನಿರ್ಮಿಸಲಾಗಿದೆ. ಕೇಂದ್ರ ಸರ್ಕಾರದ ಸಹಾಯಧನದಲ್ಲಿ "ನ್ಯಾಷನಲ್ ಕೋಸ್ಟಲ್ ಪ್ರೊಟೆಕ್ಷನ್ ಪ್ರಾಜೆಕ್ಟ್" ಕಾರ್ಯಕ್ರಮದ ಅಡಿಯಲ್ಲಿ 48.875 ಕಿ.ಮೀ. ಉದ್ದದ ಶಾಶ್ವತ ತಡೆಗೋಡೆ ನಿರ್ಮಿಸಲು ರೂ. 135.95 ಕೋಟಿ ಅಂದಾಜಿನ ಪ್ರಸ್ತಾವನೆಯನ್ನು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದು ಮಂಜೂರಾತಿ ನಿರೀಕ್ಷಿಸಲಾಗಿದೆ.

ಕಳೆದ ಮೂರು ವರ್ಷಗಳಲ್ಲಿ ವಿನಿಯೋಗಿಸಲಾದ ಹಣದ ಮೊತ್ತ

	ರೂ. ಲಕ್ಷಗಳಲ್ಲಿ
2001–02	ರೂ. 395.44
2002–03	ರೂ. 431.51
2003–04	ರೂ. 372.22
ಒಟ್ಟು	**ರೂ. 1199.17**